# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 20.05.2026 ರಂದು ಪೂರ್ವಾಹ್ನ ಗಂಟೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2026ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು :**

| | | |
|---|---|---|
| 1. | ಪ್ರೊ. ಪಿ.ಎಲ್. ಧರ್ಮ<br>ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಕವಿತಾ ಕೆ.ಆರ್.<br>ಜಂಟಿ ನಿರ್ದೇಶಕರು (ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 3. | ಪ್ರೊ. ಪುಟ್ಟಣ್ಣ ಕೆ.<br>ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 4. | ಡಾ. ಎಸ್.ಬಿ.ಎಂ. ಪ್ರಸನ್ನ | ಸದಸ್ಯರು |
| 5. | ಡಾ.ಕೆ.ಸಿ. ಮಹದೇಶ | ಸದಸ್ಯರು |
| 6. | ಪ್ರೊ. ಉದಯ ಕುಮಾರ್ ಬಿ. | ಸದಸ್ಯರು |
| 7. | ಶ್ರೀ ನಿತ್ಯಾನಂದ ವಿ. ಗಾಂವಕರ | ಸದಸ್ಯರು |
| 8. | ಶ್ರೀಮತಿ ಶೃತಿ ಶೆಟ್ಟಿ | ಸದಸ್ಯರು |
| 9. | ಶ್ರೀ ಅಲೆಕ್ಸ್ ಐವನ್ ಸಿಕ್ವೇರಾ | ಸದಸ್ಯರು |
| 10. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು |
| 11. | ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿ | ಸದಸ್ಯರು |
| 12. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು |
| 13. | ಶ್ರೀ ರಘುರಾಜ್ | ಸದಸ್ಯರು |
| 14. | ಶ್ರೀ ಅಚ್ಚುತ ಗಟ್ಟಿ | ಸದಸ್ಯರು |

| | | |
|---|---|---|
| 15. | ಪ್ರೊ. ಹೆಚ್. ದೇವೇಂದ್ರಪ್ಪ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16. | ಶ್ರೀ ಪಂಚಲಿಂಗಸ್ವಾಮಿ, **ಕೆ.ಎಸ್.ಎ.ಎಸ್.,**<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು |
| 17. | ಡಾ. ಗಣೇಶ್ ಸಂಜೀವ್<br>ಪ್ರಭಾರ ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ |

**ಅನುಪಸ್ಥಿತರು:**

| | | |
|---|---|---|
| 1. | ತಾಂತ್ರಿಕ ಶಿಕ್ಷಣ ನಿರ್ದೇಶಕರು,<br>ಕರ್ನಾಟಕ ಸರ್ಕಾರ<br>ಬೆಂಗಳೂರು | ಸದಸ್ಯರು |
| 2. | ಶ್ರೀ ಮಹಮ್ಮದ್ ಸವಾದ್ | ಸದಸ್ಯರು |
| 3. | ಡಾ. ಸಂದೇಶ್ ಕೆ.ಎಸ್<br>(ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪರವಾಗಿ) | ಸದಸ್ಯರು |
| 4. | ಶ್ರೀಮತಿ ಪುಷ್ಪಲತಾ ಹೆಚ್.ಕೆ.<br>**(ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಆಯುಕ್ತರ ಪರವಾಗಿ)** | ಸದಸ್ಯರು |

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಿಂಡಿಕೇಟಿನ ತೃತೀಯ ಸಾಮಾನ್ಯ ಸಭೆಗೆ ಸಭಾಧ್ಯಕ್ಷರಾದ ಮಾನ್ಯ ಕುಲಪತಿಯವರನ್ನು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸ್ವಾಗತಿಸಿದರು.

## ಪ್ರಾಸ್ತಾವಿಕ

**ಮಾನ್ಯ ಕುಲಪತಿಯವರು ಮತ್ತೊಮ್ಮೆ ಎಲ್ಲರನ್ನು ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಿದರು.**

**ಈ ಕೆಳಗಿನ ವಿಷಯಗಳನ್ನು ಸಭೆಯ ಗಮನಕ್ಕೆ ತರಲಾಯಿತು.**

1. ವಿಶ್ವವಿದ್ಯಾನಿಲಯದ ಖಾಯಂ ಹಾಗೂ ತಾತ್ಕಾಲಿಕ ಸಿಬ್ಬಂದಿಗಳನ್ನು ಜಿಲ್ಲಾಡಳಿತವು ರಾಷ್ಟ್ರೀಯ ಜನಗಣತಿ ಕಾರ್ಯಕ್ಕೆ ಒಂದು ತಿಂಗಳುಗಳ ಕಾಲ ನಿಯೋಜಿಸಿದ್ದರಿಂದ ಸಿಬ್ಬಂದಿಗಳ ಅನುಪಸ್ಥಿತಿ ವಿಶ್ವವಿದ್ಯಾನಿಲಯದ ಆಡಳಿತ ವ್ಯವಸ್ಥೆಯ ಮೇಲೆ ವ್ಯತಿರೀಕ್ತ ಪರಿಣಾಮ ಬೀರಿದ ಹಿನ್ನಲೆಯಲ್ಲಿ ಈ ಹಿಂದೆ ನಿಗದಿಪಡಿಸಲಾಗಿದ್ದ ಸಿಂಡಿಕೇಟು ಸಭೆಯನ್ನು ಅನಿವಾರ್ಯವಾಗಿ ಮುಂದೂಡಬೇಕಾಯಿತು ಎಂದು ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ಸುರೇಶ್ ಕುಮಾರ್ ಬಿ. ನಾವೂರು ಇವರ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸಭೆಗೆ ಮಾಹಿತಿ ನೀಡಲಾಯಿತು.

### I. ಅನುಸರಣಾ ವರದಿಯ ಅನುಮೋದನೆ

**ದಿನಾಂಕ 13.03.2026ರಂದು ನಡೆದ ಸಿಂಡಿಕೇಟಿನ 2026ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.**

- **ಅನುಮೋದಿಸಲಾಯಿತು**

### II. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.3:01(2026)

ವಿಷಯ: ಡಾ. ನಿರ್ಮಲ್ ರಾಜು, ನಿವೃತ್ತ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಲ್ಲಿಸಿದ್ದ ಸೇವೆಯ ಪಿಂಚಣಿ ವಂತಿಗೆಯನ್ನು ಸ್ವತ: ಸದರಿಯವರೇ ಪಾವತಿಸುವ ಕುರಿತು.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಲ್ಲಿಸಿರುವ ಸೇವೆಗೆ ಅರ್ಹವಾಗಿರುವ ಪಿಂಚಣಿ ಹಾಗೂ ನಿವೃತ್ತಿ ಉಪದಾನ ಮೊತ್ತವನ್ನು ಮಾತ್ರ ಎರಡು ಹಂತದಲ್ಲಿ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.3:02(2026)

ವಿಷಯ: 15 ವರ್ಷ ಪೂರೈಸಲಿರುವ ಮಂಗಳೂರು ವಿಶ್ವವಿದ್ಯಾನಿಲಯದ ಮೂರು ವಾಹನಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.3:03(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ದೂರವಾಣಿ ಕೇಂದ್ರಕ್ಕೆ ಹಾಗೂ ಅದರ ಅಧೀನದಲ್ಲಿರುವ ವಸತಿ ಗೃಹಗಳ ನೀರಿನ ನಿರ್ವಹಣೆಯ ವಾರ್ಷಿಕ ವೆಚ್ಚದಲ್ಲಿ ರಿಯಾಯಿತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.3:04(2026)

ವಿಷಯ: ಶೈಕ್ಷಣಿಕ ವರ್ಷ 2025-26ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಮತ್ತು ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಇಲ್ಲಿ ನಡೆಸಲ್ಪಡುವ ವಿವಿಧ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ವಿದ್ಯಾರ್ಥಿ ಪರಿಮಿತಿಯನ್ನು ನಿಗದಿಪಡಿಸಿರುವ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.3:05(2026)

ವಿಷಯ: ಶೈಕ್ಷಣಿಕ ವರ್ಷ 2026-27ನೇ ಸಾಲಿನಲ್ಲಿ ಸ್ವಾಯತ್ತ ಕಾಲೇಜುಗಳು ಪ್ರಾರಂಭಿಸಲು ಉದ್ದೇಶಿಸಿರುವ ಹೊಸ ಕಾರ್ಯಕ್ರಮಗಳು/ಕೋರ್ಸುಗಳು/ ಸಹಯೋಗಗಳು ಮತ್ತು ಹೆಚ್ಚುವರಿ ವಿಭಾಗಗಳಿಗೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.3:06(2026)

ವಿಷಯ: ಸರಕಾರದ ಅಭಿವೃದ್ಧಿ ಅನುದಾನದ ಅಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಅಗತ್ಯವಿರುವ ಉಪಕರಣಗಳನ್ನು ಖರೀದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.3:07(2026)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ಫೆಬ್ರವರಿ 2026ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** ಡೀನರ ನೆಲೆಯಲ್ಲಿ ಸಿಂಡಿಕೇಟು ಸದಸ್ಯರಾಗಿರುವ ಪ್ರೊ.ಪುಟ್ಟಣ್ಣ ಕೆ. ಇವರು ವರದಿಯನ್ನು ಸಿಂಡಿಕೇಟು ಸಭೆಯ ಅವಗಾಹನೆಗೆ ಮಂಡಿಸಿದರು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ:ಸಾ.ಸ.3:08(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಮುಂದುವರಿದು, ಸಿಂಡಿಕೇಟು ಸದಸ್ಯರುಗಳ ಹೆಸರುಗಳನ್ನು ಸವಿವರಗಳೊಂದಿಗೆ ವಾರ್ಷಿಕ ವರದಿಯಲ್ಲಿ ಮುದ್ರಿಸಲು ಹಾಗೂ ಅಂತಿಮ ಪ್ರತಿಗಳನ್ನು ಮಾನ್ಯ ಸಿಂಡಿಕೇಟು ಸದಸ್ಯರುಗಳಿಗೆ ನೀಡಲು ನಿರ್ಣಯಿಸಲಾಯಿತು. ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ. ಕೆ.ಸಿ. ಮಹದೇಶ ಮತ್ತು ಡಾ. ಎಸ್.ಬಿ.ಎಂ. ಪ್ರಸನ್ನ ಇವರುಗಳು ಸಭೆಯ ಕಾರ್ಯಸೂಚಿಯೊಂದಿಗೆ ವಾರ್ಷಿಕ ವರದಿಯ ಹಾರ್ಡ್ ಕಾಪಿಯನ್ನು ನೀಡದಿರುವ ಬಗ್ಗೆ ಆಕ್ಷೇಪಿಸಿ ತಮ್ಮ Dissent Note ನೀಡಿರುತ್ತಾರೆ.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.3:09(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ "ಸಂತಕವಿ ಕನಕದಾಸ ನಗದು ಪುರಸ್ಕಾರ" ನಗದು ಬಹುಮಾನ ಪ್ರದಾನ ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.3:10(2026)

ವಿಷಯ: ಡಿಸೆಂಬರ್ 2025/ ಜನವರಿ 2026ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ತನಿಖಾ ವರದಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಪರೀಕ್ಷಾ ಅವ್ಯವಹಾರಗಳು ಮರುಕಳಿಸುತ್ತಿರುವ ಪರೀಕ್ಷಾ ಕೇಂದ್ರಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಹಾಗೂ ಕಳೆದ ಸಾಲಿನಲ್ಲಿ ಪರೀಕ್ಷಾ ಅವ್ಯವಹಾರಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಕ್ರೋಢೀಕೃತ ಪಟ್ಟಿಯನ್ನು ಮಾನ್ಯ ಸಿಂಡಿಕೇಟು ಸದಸ್ಯರುಗಳಿಗೆ ನೀಡಲು ನಿರ್ಣಯಿಸಲಾಯಿತು.

ಪ್ರಸಕ್ತ ಸಾಲಿನಲ್ಲಿ ಅತೀ ಹೆಚ್ಚು ಪರೀಕ್ಷಾ ಅವ್ಯವಹಾರ ನಡೆದ ಸಂಸ್ಥೆಯಲ್ಲಿಯೇ ಈ ಹಿಂದಿನ ಸಾಲಿನಲ್ಲಿ ಕೂಡಾ ಹೆಚ್ಚಿನ ಪರೀಕ್ಷಾ ಅಕ್ರಮ ನಡೆದಿರುವ ಬಗ್ಗೆ ದಾಖಲೆಗಳು ಕಂಡುಬಂದಿರುತ್ತದೆ. ಈ ಬಗ್ಗೆ ಸರಿಯಾದ ಕ್ರಮಕೈಗೊಳ್ಳುವಲ್ಲಿ ಸಂಬಂಧಿತ ಕಛೇರಿ ವಿಫಲವಾಗಿರುವುದನ್ನು ಸಿಂಡಿಕೇಟು ತೀವ್ರವಾಗಿ ಸರ್ವಾನುಮತದಿಂದ ಖಂಡಿಸಿತು. ಇನ್ನು ಮುಂದಕ್ಕೆ ಇಂತಹ ಸಂದರ್ಭಗಳು ಎದುರಾದಲ್ಲಿ ಸಂಬಂಧಪಟ್ಟ ಅಧಿಕಾರಿಯವರನ್ನು ವೈಯುಕ್ತಿಕ ಹೊಣೆಗಾರರನ್ನಾಗಿಸಲು ನಿರ್ಧರಿಸಲಾಯಿತು. ಸಿಂಡಿಕೇಟಿಗೆ ಮಾಹಿತಿ ನೀಡುವಾಗ ಸ್ಪಷ್ಟ ಹಾಗೂ ಸರಿಯಾದ ಮಾಹಿತಿ ನೀಡುವಂತೆ ತಿಳಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.3:11(2026)

ವಿಷಯ: ಡಾ.ಕೆ.ಸಿ. ಮಹದೇಶ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ. ಮಂಗಳೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ ಕಾರ್ಯ ಚಟುವಟಿಕೆಗಳ ಬಗ್ಗೆ "ಸಮಿತಿಯನ್ನು ರಚಿಸಲಾಗಿದ್ದು" ಸಮಿತಿಯ ಅಭಿವೃದ್ಧಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಚರ್ಚಿಸಿ ನಿರ್ಣಯಿಸಲು ಕೋರಿದೆ.

**ನಿರ್ಣಯ:** ದಿನಾಂಕ 05.03.2026 ರಂದು ಕಾರ್ಯಕಾರಿ ಅಭಿಯಂತರರ ಕಛೇರಿಯಲ್ಲಿ ನಡೆದ ಕಾರ್ಯಕಾರಿ ಅಭಿಯಂತರರ ಕಾರ್ಯಚಟುವಟಿಕೆಗಳ ಪರಿಶೀಲನಾ ಸಮಿತಿಯ ಸಭೆಯ ನಡವಳಿಯಲ್ಲಿ ಸೂಚಿಸಿರುವ ಅಂಶಗಳನ್ನು ತಕ್ಷಣದಿಂದ ಜ್ಯಾರಿಗೊಳಿಸಲು ಕ್ರಮವಹಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.3:12(2026)

ವಿಷಯ: ಶ್ರೀ ಅಚ್ಚುತ ಗಟ್ಟಿ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

**ವಿಷಯ-1:** ತಾ.13.03.2026ರ ಸಿಂಡಿಕೇಟು ಸಭೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಸಿಬ್ಬಂದಿಗಳಿಗೆ ವೇತನ ಹೆಚ್ಚಳ ಮಾಡುವಂತೆ ಸರ್ವಾನುಮತದಿಂದ ತೀರ್ಮಾನಿಸಲಾಗಿತ್ತು. ಆದರೆ ನಿರ್ಣಯದಲ್ಲಿ ಎಟೆಂಡರ್ ಮತ್ತು ಜವಾನರುಗಳನ್ನು ಹೊರತುಪಡಿಸಿ ನಿರ್ಣಯಿಸಲಾಗಿದೆ. ಎಟೆಂಡರ್ ಮತ್ತು ಜವಾನರುಗಳನ್ನು ಸಹ 13.03.2026ರ ನಿರ್ಣಯದಲ್ಲಿ ವೇತನ ಹೆಚ್ಚಿಸಲಾಗಿದೆ ಎಂಬ ನಿರ್ಣಯವನ್ನು ಕೈಗೊಳ್ಳಬೇಕಾಗಿ ಪ್ರಸ್ತಾವನೆ.

**ನಿರ್ಣಯ:** ವೇತನ ಹೆಚ್ಚಳ ಮಾಡದಿರುವ ಸಿಬ್ಬಂದಿಗಳ ವೇತನವನ್ನು ಸಹ ಹೆಚ್ಚಿಸಲು ನಿರ್ಣಯಿಸಲಾಯಿತು ಹಾಗೂ ಈ ಬಗ್ಗೆ ಏಕರೂಪದ ನೀತಿಯನ್ನು ಅನುಸರಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಲಾಯಿತು.

| | |
|---|---|
| ವಿಷಯ-2: | 13.03.2026ರ ಕಾರ್ಯಸೂಚಿ ಸಂಖ್ಯೆ 2:20ರ ಬಗ್ಗೆ ವಿಶ್ವಮಂಗಳ ವಿದ್ಯಾಸಂಸ್ಥೆಯು ಕಳೆದ 40 ವರ್ಷಗಳಿಂದ ಉತ್ತಮ ಶಿಕ್ಷಣವನ್ನು ನೀಡುವ ಸಂಸ್ಥೆಯಾಗಿದ್ದು, ಈ ಸಂಸ್ಥೆಯ ಆಡಳಿತ ಸಮಿತಿಯಲ್ಲಿ ಕಳೆದ 30 ವರ್ಷಗಳಿಂದಲೂ ವಿಶ್ವವಿದ್ಯಾನಿಲಯದ ಕುಲಸಚಿವರು, ಹಣಕಾಸು ಅಧಿಕಾರಿಗಳು, ಮುಖ್ಯ ಕಾರ್ಯಕಾರಿ ಅಭಿಯಂತರರು ಆಡಳಿತ ಸಮಿತಿಯಲ್ಲಿ ಸದಸ್ಯರಾಗಿದ್ದರು. ಕಳೆದ 10 ವರ್ಷಗಳಿಂದ ವಿಶ್ವವಿದ್ಯಾನಿಲಯದ ಈ ಮೇಲಿನ ಅಧಿಕಾರಿಗಳು ಸಮಿತಿಯಲ್ಲಿಲ್ಲದಿರುವುದರಿಂದ ಸಂಸ್ಥೆಯ ಆಡಳಿತ ವ್ಯವಸ್ಥೆ ದುರ್ಬಲವಾಗಿರುವುದರಿದ ಮುಂದಕ್ಕೆ ಶೀಘ್ರವಾಗಿ ಹೊಸ ಸಮಿತಿ ರಚನೆ ಮಾಡಿ ಈ ಹಿಂದಿನಂತೆ ಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾವನೆ. |
| **ನಿರ್ಣಯ:** | ಈ ಬಗ್ಗೆ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಿ ವಿಶ್ವಮಂಗಳ ವಿದ್ಯಾಸಂಸ್ಥೆಯನ್ನು ವಿಶ್ವವಿದ್ಯಾನಿಲಯದ ಆಡಳಿತ ವ್ಯಾಪ್ತಿಗೆ ಹಿಂಪಡೆಯುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಲಾಯಿತು. |
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.3:13(2026) |
| ವಿಷಯ: | ಡಾ. ಯಶಸ್ವಿನಿ ಬಿ., ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ, ಇವರಿಗೆ ಸಹಾಯಕ ಪ್ರಾಧ್ಯಾಪಕರ ಹಂತ 2ಗೆ ನೀಡಿರುವ ಪದೋನ್ನತಿ ದಿನಾಂಕವನ್ನು ಪರಿಷ್ಕರಿಸುವುದಕ್ಕೆ ಸಂಬಂಧಿಸಿ Screening - cum - Evaluation ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.3:14(2026) |
| ವಿಷಯ: | ಯು.ಜಿ.ಸಿ. ನಿಯಮಾವಳಿ 2018ರ ಪ್ರಕಾರ Career Advancement Scheme ನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ / ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ - ಆಯ್ಕೆ ಸಮಿತಿ / Screening - cum - Evaluation ಸಮಿತಿ ಸಭೆಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.3:15(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.3:16(2026)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ಮಾರ್ಚ್ 2026ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** ಡೀನರ ನೆಲೆಯಲ್ಲಿ ಸಿಂಡಿಕೇಟು ಸದಸ್ಯರಾಗಿರುವ ಪ್ರೊ.ಪುಟ್ಟಣ್ಣ ಕೆ. ಇವರು ವರದಿಯನ್ನು ಸಿಂಡಿಕೇಟು ಸಭೆಯ ಅವಗಾಹನೆಗೆ ಮಂಡಿಸಿದರು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.3:17(2026)

ವಿಷಯ: 44ನೇ ಘಟಿಕೋತ್ಸವ ಕಾರ್ಯಕ್ರಮದ ಪ್ರಯುಕ್ತ ತಗಲಿದ ಭೋಜನ ವೆಚ್ಚದ ಬಿಲ್ಲು ಪಾವತಿಯ ಘಟನೋತ್ತರ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.3:18(2026)

ವಿಷಯ: ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ), ಮಂಗಳೂರು ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2022-23ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಸ್ವಾಯತ್ತ ಸ್ಥಾನಮಾನವನ್ನು ಮುಂದುವರಿಸಲು ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.3:19(2026)

ವಿಷಯ: ಸಂತ ಆಗ್ನೇಸ್ ಕಾಲೇಜು (ಸ್ವಾಯತ್ತ), ಮಂಗಳೂರು ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2022-23ನೇ ಸಾಲಿನಿಂದ 2031-32ನೇ ಸಾಲಿನವರೆಗೆ ಸ್ವಾಯತ್ತ ಸ್ಥಾನಮಾನವನ್ನು ಮುಂದುವರಿಸಲು ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.3:20(2026

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ AICTE CAFES ಪ್ರಾಜೆಕ್ಟನಡಿ ನಿರ್ಮಾಣಗೊಂಡಿರುವ ಮಹಿಳೆಯರ ವಸತಿನಿಲಯಕ್ಕೆ AICTE CAFES ಪ್ರಾಜೆಕ್ಟನಡಿ ಮಂಜೂರಾದ ಅನುದಾನದಡಿ ಉಪಕರಣಗಳನ್ನು ಖರೀದಿ ಮಾಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ:ಸಾ.ಸ.3:21(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ / ಕಚೇರಿಗಳಿಗೆ Multi Function Printer ಗಳನ್ನು ಪಿಎಂ-ಉಷಾ ಯೋಜನೆಯ ಅನುದಾನದಿಂದ ಖರೀದಿಸುವ ಬಗ್ಗೆ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ:ಸಾ.ಸ.3:22(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ / ಕಚೇರಿಗಳಿಗೆ Laptop ಗಳನ್ನು ಪಿಎಂ-ಉಷಾ ಯೋಜನೆಯ ಅನುದಾನದಿಂದ ಖರೀದಿಸುವ ಬಗ್ಗೆ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ:ಸಾ.ಸ.3:23(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗಕ್ಕೆ Ice Making Machine ಉಪಕರಣವನ್ನು ಪಿಎಂ-ಉಷಾ ಯೋಜನೆಯ ಅನುದಾನದಿಂದ ಖರೀದಿಸುವ ಬಗ್ಗೆ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ:ಸಾ.ಸ.3:24(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ / ಕಚೇರಿಗಳಿಗೆ Desktop ಗಳನ್ನು ಪಿಎಂ-ಉಷಾ ಯೋಜನೆಯ ಅನುದಾನದಿಂದ ಖರೀದಿಸುವ ಬಗ್ಗೆ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ:ಸಾ.ಸ.3:25(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯಕ್ಕೆ Work Station ನ್ನು ಪಿಎಂ-ಉಷಾ ಯೋಜನೆಯ ಅನುದಾನದಿಂದ ಖರೀದಿಸುವ ಬಗ್ಗೆ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ:ಸಾ.ಸ.3:26(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಚೇರಿ / ವಿಭಾಗಗಳಿಗೆ Computer Table ಮತ್ತು Computer Chair ಗಳನ್ನು ಪಿಎಂ-ಉಷಾ ಯೋಜನೆಯ ಅನುದಾನದಿಂದ ಖರೀದಿಸುವ ಬಗ್ಗೆ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ:ಸಾ.ಸ.3:27(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ / ಕಚೇರಿಗಳಿಗೆ Smart Board ಹಾಗೂ Interactive Panel ಗಳನ್ನು ಪಿಎಂ-ಉಷಾ ಯೋಜನೆಯ ಅನುದಾನದಿಂದ ಖರೀದಿಸುವ ಬಗ್ಗೆ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ:ಸಾ.ಸ.3:28(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ / ಕಚೇರಿಗಳಿಗೆ UPS ಗಳನ್ನು ಪಿಎಂ-ಉಷಾ ಯೋಜನೆಯ ಅನುದಾನದಿಂದ ಖರೀದಿಸುವ ಬಗ್ಗೆ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.3:29(2026)

ವಿಷಯ: ಲೆಕ್ಕ ಶೀರ್ಷಿಕೆ ಸಂಖ್ಯೆ '1507' ರಡಿಯಲ್ಲಿ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಆಟದ ಮೈದಾನದ ಬದಿಯಲ್ಲಿ RCC drain ಮತ್ತು ಕಾಂಕ್ರೀಟ್ ಗೋಡೆ ನಿರ್ಮಿಸುವುದು - ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.3:30(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2026-27ನೇ ಸಾಲಿನ ಸ್ನಾತಕ / ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಅಗತ್ಯವಿರುವ Pre-printed Programme Grade Card, Pre-printed Marks Cards (NEP), Pre-printed Grade Marks Cards ನ್ನು ವಿದ್ಯುನ್ಮಾನ ಸಂಗ್ರಹಣಾ ವಿಧಾನದ ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.3:31(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2026-27ನೇ ಸಾಲಿನ ಸ್ನಾತಕ / ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಅಗತ್ಯವಿರುವ ಉತ್ತರ ಪತ್ರಿಕೆ (with Bar Code on front page only) ಗಳನ್ನು ವಿದ್ಯುನ್ಮಾನ ಸಂಗ್ರಹಣಾ ವಿಧಾನದ ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.3:32(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2026-27ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ, ಅಗತ್ಯವಿರುವ ಪದವಿ ಪ್ರಮಾಣ ಪತ್ರಗಳನ್ನು ವಿದ್ಯುನ್ಮಾನ ಸಂಗ್ರಹಣಾ ವಿಧಾನದ ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.3:33(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2026-27ನೇ ಸಾಲಿನ ಸ್ನಾತಕ / ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ, ಅಗತ್ಯವಿರುವ ಪರೀಕ್ಷಾ ಸಾಮಾಗ್ರಿಗಳನ್ನು ಮತ್ತು ಕವರುಗಳನ್ನು ವಿದ್ಯುನ್ಮಾನ ಸಂಗ್ರಹಣಾ ವಿಧಾನದ ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಇತರೆ ವಿಷಯಗಳು:**

1) ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ ಕಳೆದ ಸಾಲಿನಲ್ಲಿ ನಡೆಸುತ್ತಿದ್ದ ಎಲ್ಲಾ ಸ್ನಾತಕೋತ್ತರ ಪ್ರೋಗ್ರಾಂಗಳನ್ನು ಮುಂದುವರಿಸಲು ಸಿಂಡಿಕೇಟು ಸದಸ್ಯರು ಒತ್ತಾಯಿಸಿದರು. ಮಾನ್ಯ ಸದಸ್ಯರುಗಳ ಸಲಹೆಯಂತೆ, ಇಲ್ಲಿನ ಸ್ನಾತಕೋತ್ತರ ಪ್ರವೇಶಾತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಆಯ್ದ ಪ್ರೋಗ್ರಾಂಗಳನ್ನು ಮುಂದುವರಿಸುವ ಬಗ್ಗೆ ಪರಿಶೀಲಿಸಲು ನಿರ್ಣಯಿಸಲಾಯಿತು. ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ಹೊಸ ಬಗೆಯ ಕೋರ್ಸ್ ಗಳನ್ನು ಪಾರಂಭಿಸುವ ಪೂರಕವಾಗಿ Add-on-Course ರೀತಿಯಲ್ಲಿ ಪ್ರಾರಂಭಿಸಿ ಬೇಡಿಕೆ ಇದ್ದಲ್ಲಿ ಹೊಸ ವಿಷಯಗಳ ಕೋರ್ಸ್ ಪ್ರಾರಂಭಿಸುವ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ನೀಡಿದ ಸಲಹೆಯನ್ನು ಒಪ್ಪಲಾಯಿತು.

2) ವಿಶ್ವವಿದ್ಯಾನಿಲಯದ ಪ್ರವೇಶಾತಿಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳನ್ನು ಆಕರ್ಷಿಸಲು ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳ ಧನಾತ್ಮಕ ಅಂಶಗಳನ್ನು ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸರಿಸಲು ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು. ವಿಶ್ವವಿದ್ಯಾನಿಲಯದ ಪ್ರವೇಶಕ್ಕೆ ಸಂಬಂಧಿಸಿದಂತೆ, ಮಾರುಕಟ್ಟೆ ಮಾಡಲು ಪತ್ರಿಕಾ ಮಾಧ್ಯಮ ಹಾಗೂ ಇಲೆಕ್ಟ್ರಾನಿಕ ಮಾಧ್ಯಮಗಳಲ್ಲಿ ಪ್ರಸರಿಸಲು ಅನುಕೂಲವಾಗುವಂತೆ ವಿಶ್ವವಿದ್ಯಾನಿಲಯದ ವಾರ್ಷಿಕ ಬಜೆಟ್ ನಲ್ಲಿ ಪ್ರತ್ಯೇಕ ಅನುದಾನ ನಿಗದಿಪಡಿಸುವ ಬಗ್ಗೆ ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿಯವರು ನೀಡಿದ ಸಲಹೆಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

3) ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ವಿಶ್ವವಿದ್ಯಾನಿಲಯ ಕ್ಯಾಂಪಸ್‌ನಲ್ಲಿ ಉದ್ಯೋಗ ಮೇಳ ನಡೆಸುವ ಬಗ್ಗೆ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

4) ಸ್ವಾಯತ್ತ ಕಾಲೇಜುಗಳ ಸ್ವಾಯತ್ತತೆಗೆ ಸಂಬಂಧಿಸಿ, ವಿಶ್ವವಿದ್ಯಾನಿಲಯಕ್ಕೆ ಪಾವತಿಸಿದ ಶುಲ್ಕದ ವಿವರಗಳನ್ನು ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಎಸ್.ಬಿ.ಎಂ. ಪ್ರಸನ್ನ ಇವರಿಗೆ ನೀಡಲು ನಿರ್ಣಯಿಸಲಾಯಿತು.

5) ಅಂತರಾಷ್ಟ್ರೀಯ ಹಾಸ್ಟೆಲನ್ನು ಪೂರ್ಣಗೊಳಿಸಿ ಬಳಕೆಗೆ ಯೋಗ್ಯವಾಗಿಸುವ ನಿಟ್ಟಿನಲ್ಲಿ ಅಗತ್ಯವಿರುವ ಅನುದಾನಕ್ಕಾಗಿ ಪ್ರಸ್ತಾವನೆಯನ್ನು ತಯಾರಿಸಿ ಪ್ರಸ್ತಾವನೆಯೊಂದಿಗೆ ಇನ್ಫೋಸಿಸ್ ಪ್ರತಿಷ್ಠಾನದ ಡಾ. ಸುಧಾಮೂರ್ತಿಯವರನ್ನು ಭೇಟಿ ಮಾಡುವ ಬಗ್ಗೆ ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ಕೆ.ಸಿ. ಮಹದೇಶ ಹಾಗೂ ಡಾ. ಎಸ್.ಬಿ.ಎಂ. ಪ್ರಸನ್ನ

ಇವರುಗಳು ನೀಡಿದ ಸಲಹೆಯನ್ನು ಒಪ್ಪಲಾಯಿತು. ಅದೇ ರೀತಿ ನೆನೆಗುದಿಗೆ ಬಿದ್ದಿರುವ ವಿವಿಧ ಯೋಜನೆಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಅಗತ್ಯವಿರುವ ಅನುದಾನಕ್ಕಾಗಿ ದಾನಿಗಳ ನೆರವು ಕೋರಲು ಅನುಕೂಲವಾಗುವಂತೆ ಪ್ರಸ್ತಾವನೆಯನ್ನು ತಯಾರಿಸಲು ನಿರ್ಣಯಿಸಲಾಯಿತು.

6) ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರ ಪ್ರಸ್ತಾವನೆಯ ಮೇರೆಗೆ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಕಛೇರಿಯ ಸಮಯ ಪಾಲನೆ ಮಾಡುವ ಬಗ್ಗೆ, ಕಛೇರಿ ಸಮಯದ ಅವಧಿಯಲ್ಲಿ ಕಡ್ಡಾಯವಾಗಿ I.D. Card ಧರಿಸಲು ಹಾಗೂ ಎಲ್ಲಾ ವಿಭಾಗಗಳಲ್ಲಿ ಬಯೋಮೆಟ್ರಿಕ್‌ನ್ನು ಅಳವಡಿಸಿ, ಸಿಬ್ಬಂದಿಗಳ ಹಾಜರಾತಿಯನ್ನು ದಾಖಲಿಸುವಂತೆ ಸುತ್ತೋಲೆ ಹೊರಡಿಸಲು ನಿರ್ಣಯಿಸಲಾಯಿತು.

7) ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರ ಪ್ರಸ್ತಾವನೆಯ ಮೇರೆಗೆ, ವೇತನ ಹೆಚ್ಚಳವಾಗದ ತಾತ್ಕಾಲಿಕ ಸಿಬ್ಬಂದಿಗಳಿಗೆ ವೇತನ ಹೆಚ್ಚಿಸಲು ನಿರ್ಣಯಿಸಲಾಯಿತು.

8) ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶ ಮತ್ತು ಡಾ.ಎಸ್.ಬಿ.ಎಂ. ಪ್ರಸನ್ನ ಇವರ ಪ್ರಸ್ತಾವನೆಯ ಮೇರೆಗೆ, **Centre for Study of Social Inclusion** ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಸಿದ್ದಲಿಂಗಸ್ವಾಮಿ ಕೆ.ಪಿ., Research Associate ಇವರು ಸೇರಿದಂತೆ ಇತರ ಸಿಬ್ಬಂದಿಗಳಿಗೆ ಪರಿಷ್ಕೃತ ವೇತನ ನೀಡುವ ಬಗ್ಗೆ ವಿಷಯವನ್ನು ಸಲಹಾ ಸಮಿತಿಯ ಸಭೆಯಲ್ಲಿ ಮಂಡಿಸಿ ಅದರ ಶಿಫಾರಸ್ಸಿನೊಂದಿಗೆ ಯುಜಿಸಿಯ ಅನುಮೋದನೆಗೆ ಕಳುಹಿಸಿಕೊಡಲು ನಿರ್ಣಯಿಸಲಾಯಿತು.

9) ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶ ಮತ್ತು ಡಾ.ಎಸ್.ಬಿ.ಎಂ. ಪ್ರಸನ್ನ ಇವರ ಪ್ರಸ್ತಾವನೆಯ ಮೇರೆಗೆ, ಸರ್ಕಾರದಿಂದ ಬಿಡುಗಡೆಯಾದ ರೂ. 15 ಕೋಟಿ ಪಿಂಚಣಿ ಅನುದಾನದಲ್ಲಿ ಪ್ರತಿಯೊಬ್ಬ ನಿವೃತ್ತ ಸಿಬ್ಬಂದಿಗಳಿಗೆ ಹಂಚಿಕೆ ಮಾಡಲಾದ ನಿವೃತ್ತಿ ಉಪದಾನದ ವಿವರವನ್ನು ಸದರಿಯವರಿಗೆ ನೀಡಲು ನಿರ್ಣಯಿಸಲಾಯಿತು.

10) ಮಾನ್ಯ ಸಿಂಡಿಕೇಟು ಸದಸ್ಯರುಗಳ ಕೋರಿಕೆ ಮೇರೆಗೆ, ಉಪ ಕುಲಸಚಿವರು, ಹಿರಿಯ ಸಹಾಯಕರು ಹಾಗೂ ಇನ್ನಿತರ ಶಿಕ್ಷಕೇತರ ಉದ್ಯೋಗಿಗಳಿಗೆ ಭಡ್ತಿ ನೀಡುವ ಬಗ್ಗೆ ಈ ತಿಂಗಳೊಳಗೆ DPC ಸಭೆ ನಡೆಸಲು ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

11) ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಘುರಾಜ್ ಇವರ ಪ್ರಸ್ತಾವನೆಯ ಮೇರೆಗೆ, ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಬಾಕಿ ಇರುವ ಶಿಷ್ಯವೇತನವನ್ನು ಒಂದು ವಾರದೊಳಗೆ ಪಾವತಿಸಿ, ಮಾಹಿತಿಯನ್ನು ಮಾನ್ಯ ಸಿಂಡಿಕೇಟು ಸದಸ್ಯರುಗಳಿಗೆ ನೀಡುವಂತೆ ನಿರ್ಣಯಿಸಲಾಯಿತು.

ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಇನ್ನು ಮುಂದಕ್ಕೆ ಪ್ರತಿ ತಿಂಗಳು ನಿಗದಿತ ದಿನಾಂಕದೊಳಗೆ ಮುಂಗಡವಾಗಿ ರೂ. 10,000/- ಶಿಷ್ಯವೇತನವನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ನೀಡಲು ನಿರ್ಣಯಿಸಿರುವುದಾಗಿ ಸಭೆಗೆ ತಿಳಿಸಲಾಯಿತು.

12) ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಘುರಾಜ್ ಇವರ ಪ್ರಸ್ತಾವನೆಯ ಮೇರೆಗೆ, ಒಳ ಮೀಸಲಾತಿಯ ನಿಯಮಗಳಿಗೆ ಒಳಪಟ್ಟು 2026-27ನೇ ಸಾಲಿನ ಪಿಹೆಚ್.ಡಿ. ಸಂಶೋಧನಾ ಪ್ರವೇಶಾತಿಗೆ ಅಧಿಸೂಚನೆ ಹೊರಡಿಸಲು ನಿರ್ಣಯಿಸಲಾಯಿತು. ಜೊತೆಗೆ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾಕ್ಟರಲ್ ಡಿಗ್ರಿ ಪಡೆದು ಹತ್ತು ವರ್ಷ ಕಾರ್ಯ ನಿರ್ವಹಿಸಿದ ಅರ್ಹ ಖಾಯಂ ಅಧ್ಯಾಪಕರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಅಂಗೀಕರಿಸಲು ನಿರ್ಣಯಿಸಲಾಯಿತು.

13) ಕೊಡಗು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂಗಳೂರು ವಿಶ್ವವಿದ್ಯಾನಿಲಯದ ಖಾಯಂ ಆಸಕ್ತ ಅಧ್ಯಾಪಕರುಗಳ ಸೇವೆಯನ್ನು ಹಿಂಪಡೆಯುವ ಬಗ್ಗೆ ಕೊಡಗು ವಿಶ್ವವಿದ್ಯಾನಿಲಯವು ನಿರಾಕ್ಷೇಪಣಾ ಪತ್ರವನ್ನು ನೀಡಿದಲ್ಲಿ ಹಾಗೂ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ ಸಂಬಂಧಿಸಿದ ವಿಷಯದ ಕಾರ್ಯಭಾರವಿದ್ದಲ್ಲಿ (Workload) ಅಧ್ಯಾಪಕರುಗಳನ್ನು ಹಿಂದಕ್ಕೆ ಕರೆಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

**ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.**

ಸಹಿ/- ಸಹಿ/-

**ಕುಲಸಚಿವರು** **ಕುಲಪತಿಯವರು**